AUCTION OF TODDY AND ARRACK

SRI B. SATHYANARAYANA SINGH.—(Hospet).

500. (565) Will the Chief Minister be plesased to state :—

(*a*) whether the toddy and arrack contract auctions have taken place in all the Districts of the State this year ;

(*b*) if so, the extent of shortage or excess caused on each account in each District when compared to that of the previous year ;

(*c*) whether the Government has any proposal to change the procedure of auctioning from next year by introducing individual shopwise auction, also along with talukwise and districtwise auction ; if not, the reasons therefor ?

SRI D. DEVARAJ URS.—(Chief Minister)

(*a*) Yes.

(*b*) *Vide* statement appended.

(*c*) The procedure of individual shopwise auctions has been done this year also and hence it is already in existence.

STATEMENT

Showing the extent of shortage or excess in the Excise Sales for 1972-73 cashed on each account on each district compared to that of the previous year—*Vide* Clause (*b*) of L. A. Starred Question No. 565.

District	Toddy (figures are for the year)			Arrack		
	1971-72	1972-73	Excess + or Shortage —	1971-72	1972-73	Excess + or Shortage—
Raichur ...	54,25,200	76,32,000	+ 22,06,800	39,51,000	29,49,600	(—) 10,01,400
Gulbarga ...	58,81,200	60,00,000	+ 1,18,800	26,92,200	24,99,600	(—) 1,92,600
Bellary ...	29,28,000	26,58,000	(—) 2,70,000	47,87,400	50,50,800	+ 2,63 400
Dharwar ...	12,48,000	12,96,000	+ 48,000	42,76,800	59,97,600	+ 17,20,800
Tumkur ...	25,12,200	29,29,200	+ 4,17,000	33,75,600	34,24,860	+ 49,260
Bangalore ...	79,32,000	96,00,000	+ 16,68,000	1,69,74,000	4,33,20.000	+2,63,16,000
Mandya ...	25,33,200	30,27,600	+ 4,94,000	35,14,800	41,20,200	+ 6,05,400
Mysore ...	37,80,000	45,00,000	+ 7,20,000	58,21 200	77,80,200	+ 19,59,000
Hassan ...	24,01,200	34,86,000	+ 10,84,800	41.84,400	50,54,600	+ 8,80,200
Chickmagalur ...	14,53,200	21,00,000	+ 6,46,800	36,85,200	41,38,200	+ 4,53,000
Shimoga ...	15,49,200	24,13,200	+ 8,64,000	59,78,400	71,56,800	+ 11,78,400
Chitradurga ...	30,00.000	36,01,200	+ 6,01,200	43,10,400	46,44,000	+ 3,33,600
South Kanara ...	25,62,000	35,70,600	+ 10,08,600	1,01,19,600	1,32,25,200	+ 31,05,6 0
Belgaum ...	10,33,200	12,61,200	+ 2,28,000	62,24,400	87,87,600	+ 25,63,200
Bijapur ...	8,52,000	8,53,200	+ 1,200	37,85,520	49,84,320	+ 11,98,800
Bidar ...	10,68,000	8,41,200	(—) 2,26,800	8.48,400	7,51,200	(—) 97,200
North Kanara ...	2,35,692	2,66,352	+ 30,660	11,79,000	23.29,260	+ 11,50,260
Coorg ...	5,16,000	3,00.000	+ 84,000	29,56,800	32,06,400	+ 2,49,600
Kolar ...	21,24,000	30,00,000	+ 8,76,000	25,56,060	45,03,600	+ 19,47,540

ಶ್ರೀ ಬಿ. ಭಾಸ್ಕರಶೆಟ್ಟಿ :—ತಾವು ಕೊಟ್ಟಿರುವ ಲೆಕ್ಕಾಚಾರದ ಪ್ರಕಾರ ೭೧-೭೨ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಟಾಡಿ ಏನಿದೆಯೋ ಅದರಿಂದ ವರ್ಷಕ್ಕೆ ೨ ಲಕ್ಷದ ೧೨ ಸಾವಿರ ರೂಪಾಯಿಗಳು ಬರುತ್ತಿತ್ತು. ೭೨-೭೩ನೇ ಸಾಲಿಗೆ ೨ ಲಕ್ಷ ೯೨ ಸಾವಿರದ ೫೫೦ ರೂಪಾಯಿಗಳು ಬಂದಿವೆ. ಅಂದರೆ ೭೫ ಸಾವಿರ ರೂಪಾಯಿಗಳು ಹೆಚ್ಚಾಗಿದೆ. ಷಾಪ್‌ವೈಜ್ ಅಂದರೆ ಇಂಡಿವಿಜ್ಯುಯಲ್ ಹರಾಜುಮಾಡಿದ್ದರಿಂದ ಇಷ್ಟು ಹಣ ಹೆಚ್ಚಿಗೆ ಬಂತು. ಆದ್ದರಿಂದ ಆ ವಿಚಾರದಲ್ಲಿ ಆಲೋಚನೆಮಾಡಿ ಇನ್ನೂ ಮುಂದೆ ಎಲ್ಲ ಕಡೆಗಳಲ್ಲಿಯೂ ಷಾಪ್‌ವೈಜ್ ಆಕ್ಷನ್ ಮಾಡಲಾಗುತ್ತದೆಯೇ ?

† ಶ್ರೀ ಡಿ. ದೇವರಾಜ್ ಅರಸ್ :—ಎಲ್ಲಾ ಕಡೆಯೂ ಮಾಡಿಲ್ಲ. ಕೆಲವು ಕಡೆಗಳಲ್ಲಿ ಮಾತ್ರ ಮಾಡಿದೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವು ಕಡೆ ತಾಲ್ಲೂಕುವೈಜ್ ಆಗಿವೆ. ಕೆಲವು ಕಡೆ ಷಾಪ್‌ವೈಜ್ ಆಗಿವೆ. ಆದ್ದರಿಂದ ಮುಂದೆ ಎಲ್ಲ ಭಾಗಗಳಲ್ಲಿಯೂ ಷಾಪ್‌ವೈಜ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಅದಿನ್ನೂ ಈ ಸಾರಿಯ ಅನುಭವ. ತುಮ್ಕೂರು ಜಿಲ್ಲೆಯಲ್ಲಿ ಕೆಲವುಕಡೆ ಷಾಪ್‌ವೈಜ್ ಮಾಡುವುದಕ್ಕೆ ಹೋದಾಗ ಹೆಚ್ಚಿಗೆ ಹಣ ಬರಲಿಲ್ಲ. ಆಗ ಮತ್ತೆ ತಾಲ್ಲೂಕುವೈಜಿಗೆ ಹೋಗ ಬೇಕಾಗಿ ಬಂತು. ಆದಕ್ಕಾಗಿ ನಮ್ಮ ಅನುಕೂಲ ನೋಡಿಕೊಂಡು ಮುಂದೆ ಯೋಚನೆ ಮಾಡೋಣ.

ಶ್ರೀ ಬಿ. ಭಾಸ್ಕರಶೆಟ್ಟಿ.— ಈಗ ಷಾಪ್‌ವೈಜ್ ಮಾಡುವಾಗ ಪುನಃ ತಾಲ್ಲೂಕುವೈಜ್ ಮಾಡುವುದಕ್ಕೆ ಹೋಗದೆ ಅಧಿಕಾರಿಗಳು ತಾಲ್ಲೂಕುವೈಜ್ ಮಾಡುವುದನ್ನು ಮುಂದೆ ತಿಳಿಸದೆ ಇದ್ದರೆ, ದೊಡ್ಡ ದೊಡ್ಡ ಕಂಟ್ರಾಕ್ಟರ್‌ಗಳು ಹಣವನ್ನು ಮುಂಗಡವಾಗಿ ಪಡೆದು, ಆಕ್ಷನ್ನಿಗೆ ಹಣವಿಲ್ಲದೇ ಇದ್ದುದರಿಂದ ಟಾಡಿಯಲ್ಲಿ ಜಾಸ್ತಿ ಹಣ ಬಂದಿದೆ. ಆದ್ದರಿಂದ ಮುಂದಕ್ಕೆ ಷಾಪ್‌ವೈಜ್ ಮಾಡಿ. ಇಲ್ಲದಿದ್ದರೆ ಇದರಿಂದ ದೊಡ್ಡ ದೊಡ್ಡ ಕಂಟ್ರಾಕ್ಟ್‌ದಾರರಿಗೆ ಸಹಾಯ ಮಾಡಿ ಸಣ್ಣಪುಟ್ಟ ಕಂಟ್ರಾಕ್ಟ್‌ರ್ ಅವರಿಗೆ ಅನಾನುಕೂಲ ಮಾಡಿದಂತೆ ಆಗುವುದಿಲ್ಲವೇ ? ಆದ್ದರಿಂದ ಮುಂದೆ ಷಾಪ್‌ವೈಜ್ ಹರಾಜು ಮಾಡುವುದಕ್ಕೆ ಪ್ರಯತ್ನ ಪಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಸಣ್ಣಪುಟ್ಟ ಕಂಟ್ರಾಕ್ಟ್‌ದಾರರಿಗೆ ಪ್ರೋತ್ಸಾಹ ಕೊಡುವ ಮೊದಲು ಸರ್ಕಾರಕ್ಕೆ ವರಮಾನ ಬರುವುದನ್ನು ನೋಡಿಕೊಂಡು ಕೊಡುತ್ತೇವೆ. ಆದರೆ ನಮ್ಮ ಹಣ ಬರುವುದಕ್ಕೆ ಪ್ರೈಯಾರಿಟಿ ಕೊಡದಿದ್ದರೆ ಬಹಳ ಕಷ್ಟ.

ಶ್ರೀ ಬಿ. ಸತ್ಯನಾರಾಯಣಸಿಂಗ್.—ಈ ಆಕ್ಷನ್ನಿನಲ್ಲಿ ಗುತ್ತಿಗೆ ಹಿಡಿದಿರುವವರಿಗೆ ಇಂತಿಂಥ ಸ್ಥಳ ದಲ್ಲಿಯೇ ಅಂಗಡಿಗಳನ್ನು ತೆಗೆಯಬೇಕೆಂದು ಹೇಳಿದ್ದರೂ, ಅವರು ಕಂಡ ಕಂಡ ಕಡೆಗಳಲ್ಲಿ ಈ ಸೇಂದಿ ಅಂಗಡಿಗಳನ್ನು ತೆರೆಯುತ್ತಿದ್ದಾರೆ. ಆದರೂ ಅಧಿಕಾರಿಗಳು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಿಲ್ಲ. ಆದ್ದರಿಂದ ಇದರ ಬಗ್ಗೆ ಏನು ವ್ಯವಸ್ಥೆ ಮಾಡುತ್ತೀರಿ ?

ಶ್ರೀ ಡಿ. ದೇವರಾಜ್ ಅರಸ್.—ನಮಗೆ ಗೊತ್ತಿಲ್ಲದೆ ಅವರು ಆ ರೀತಿ ಷಾಪ್‌ಗಳನ್ನು ತೆರೆದರೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಈ ವರ್ಷದ ಟಾಡಿ ಹರಾಜಿನ ಬಗ್ಗೆ ಒಂದು ವೈಶಿಷ್ಟ್ಯವಿದೆ, ಅದರೆ ಬಳ್ಳಾರಿ ಮತ್ತು ಬಿದರ್ ಜಿಲ್ಲೆಗಳಲ್ಲಿ ಏನು ವೈಶಿಷ್ಟ್ಯವಿದೆ ?

ಶ್ರೀ ಡಿ. ದೇವರಾಜ್ ಅರಸ್.— ಇದಕ್ಕೆ ಎರಡು ಕಾರಣಗಳಿವೆ. ಒಂದೊಂದು ವರ್ಷ ಹರಾಜನ್ನು ಬಹಳ ಹೆಚ್ಚಿಗೆ ಕೂಗಿರುತ್ತಾರೆ. ಆ ಸಾರಿ ನಷ್ಟವಾದರೆ, ಈ ಸಾರಿ ಕಡಿಮೆಮಾಡುತ್ತಾರೆ. ಅದು ಒಂದು ಕಾರಣ. ಇನ್ನೊಂದು ಕಾರಣ ಕೆಲವು ಕಡೆಗಳಲ್ಲಿ ಟಾಡಿ ಸಿಗುವುದೇ ಕಷ್ಟ.

ಶ್ರೀ ಬಾಪುಗೌಡ ರಾಯಪ್ಪ.—ಈ ವರ್ಷ ಗುಲ್ಬರ್ಗಾ, ರಾಯಚೂರು ಜಿಲ್ಲೆಗಳಲ್ಲಿ ಷಾಪ್‌ವೈಜ್ ಆಕ್ಷನ್ ಮಾಡಲಿಲ್ಲ. ಜಿಲ್ಲಾವಾರ್ ಆಕ್ಷನ್ ಆಗಿದೆ. ಮತ್ತೆ ಕೆಲವೇ ಕಂಟ್ರಾಕ್ಟರ್ಸ್ ಸೇಂದಿ ಹರಾಜಿನಲ್ಲಿ ಹೆಚ್ಚು ಬಿಡ್ ಮಾಡಿದ್ದಾರೆ. ಆದರೆ ರಾಯಚೂರು ಮತ್ತು ಬಿದರ್‌ಗಳಲ್ಲಿ ಕಡಿಮೆ ಆಕ್ಷನ್ ಬಂದಿದೆ. ಆದ್ದರಿಂದ ಷಾಪ್‌ವೈಜ್ ಆಕ್ಷನ್ ಮಾಡುವ ವ್ಯವಸ್ಥೆ ಮಾಡುತ್ತೀರಾ ?

†Astericks Indicates that remarks or Speechas have not been revised by the member Concerned.

ಶ್ರೀ ಡಿ. ದೇವರಾಜ್ ಅರಸ್ —ಈಗ ರಾಯಚೂರು ಮತ್ತು ಗುಲ್ಬರ್ಗ. ಹಾಗೂ ಬಿದರ್ ಜಿಲ್ಲೆಗಳ ಕಥೆಯೇ ಬೇರೆಯ ತರಹ ಇದೆ. ನಾನು ಮೊದಲೇ ಹೇಳಿದಹಾಗೆ, ಹೋದ ಸಾರಿ ಬಹಳ ಜಾಸ್ತಿ ಬಿಡ್ ಮಾಡಿ ಈ ಸಾರಿ ಕಡಿಮೆಯಾಗಿದೆ ಎಲ್ಲಾ ವರ್ಷಗಳಲ್ಲಿಯೂ, ಎಲ್ಲಾ ಕಡೆಯೂ ಬಿಡ್‌ನಿಂದ ಲಾಭ ಬರುತ್ತಿಲ್ಲ. ಬಿಡ್ ಮಾಡಿರುವವರು ಕೆಲವು ವರ್ಷಗಳಲ್ಲಿ ನಷ್ಟ ಹೊಂದಿದ್ದಾರೆ. ಆದ್ದರಿಂದ ಅವರ ಹತ್ತಿರ ಮಾತನ್ನಾಡಿದ್ದರಿಂದ ಆ ರೀತಿಯಾಯಿತು. ಡಿಸ್ಟ್ರಿಕ್ಷನ್ ಲೋಕಲ್ ಆಫೀಸರ್ಸ್‌ಗೆ ಕೊಟ್ಟಾಗ್ಗೆ ಯಾವ ಟೆಂಡರ್ ನೆಗೋಷಿಯೇಷನ್ನಿನಿಂದ ಹೆಚ್ಚಿಗೆ ಬರಬೇಕೋ ಅದು ಬರುವವರೆಗೂ ಕಾದಿದ್ದು ಆಮೇಲೆ ಆ ಆಕ್ಷನ್ ಮೌಲ್ಯವನ್ನು ಒಪ್ಪಿಕೊಳುತ್ತಾನೆ. ಗುಲ್ಬರ್ಗಾದಲ್ಲಿ ಹೋದಸಾರಿ ಹೆಚ್ಚಿಗೆ ಇತ್ತು. ಈಗ ಬೇರೆಬೇರೆ ಲೋಕಲ್ ಕಂಡಿಷನ್ಸ್ ಇರುವುದರಿಂದ ಸೇಲ್ಸ್ ಕಡಿಮೆಯಾಗುವ ಅಂದಾಜು ಇರುತ್ತದೆ. ಆ ಕಾರಣದಿಂದ ಬಿಡ್ಸ್ ಕಡಿಮೆಯಾಗುತ್ತದೆ.

ಶ್ರೀ ಶರಣಪ್ಪ —ಮೊದಲು ಹೈದರಾಬಾದ್ ಕರ್ನಾಟಕದಲ್ಲಿ ರಾಯಚೂರು ಮತ್ತು ಗುಲ್ಬರ್ಗಾ ಮತ್ತು ಬಿದರ್‌ಗಳಲ್ಲಿ ಸೇಂದಿ ಅಂಗಡಿಗಳನ್ನು ವ್ಯಕ್ತಿಗತವಾಗಿ ಆಕ್ಷನ್ ಮಾಡುತ್ತಿದ್ದರಿ ಇದರಿಂದ ಲಾಭ ಇತ್ತು. ಆದರಲ್ಲಿ ಸಣ್ಣಸಣ್ಣ ಜನರಿಗೂ ಒಂದು ಅವಕಾಶವಿತ್ತು. ಒಂದು ರೀತಿ ಸ್ಯಾಟಿಸ್‌ಫ್ಯಾಕ್ಷನ್ ಇತ್ತು. ಆದರ ಜೊತೆಗೆ ಕೆಲಸಮಾಡುವ ಜನರಿಗೂ ಒಂದು ಅವಕಾಶ ಸಿಕ್ಕಿತ್ತು. ಈಗ ದೊಡ್ಡದೊಡ್ಡ ಕಂಟ್ರಾಕ್ಟರರುಗಳು ಹೆಚ್ಚು ಹರಾಜುಮಾಡಿ, ಅದನ್ನು ಸಬ್ ಕಂಟ್ರಾಕ್ಟರಿಗೆ ಹೆಚ್ಚಿನ ಲಾಭಕ್ಕೆ ಕೊಟ್ಟು ಹೆಚ್ಚು ಆದಾಯವನ್ನು ಪಡೆಯುತ್ತಿದ್ದಾರೆ. ಈ ದೃಷ್ಟಿಯಿಂದ ಇನ್ನುಮುಂದೆ ಸಣ್ಣ ಜನರಿಗೂ ಇದರಿಂದ ಅನುಕೂಲವಾಗುವ ಹಾಗೆ ಮತ್ತು ಸರ್ಕಾರಕ್ಕೂ ಹೆಚ್ಚು ಆದಾಯ ಬರುವಂತೆ ಏನಾದರೂ ಒಳ್ಳೆಯ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್ —ಸರಕಾರಕ್ಕೆ ಆದಾಯ ಬರಬೇಕು, ಸಣ್ಣ ಜನಗಳಿಗೆ ಇದರಲ್ಲಿ ಅವಕಾಶ ಸಿಗಬೇಕೆಂದು ಎರಡು ತತ್ವಗಳನ್ನೂ ಬೆರಕೆ ಮಾಡುವುದು ಕಷ್ಟವಾಗುತ್ತದೆ. ಆದಾಯ ಕಡಿಮೆಯಾದರೂ ಅದಕ್ಕೂ ತಯಾರಾಗಿರಬೇಕು. ಎಕ್ಸ್‌ಪೆರಿಮೆಂಟ್ ಮಾಡಿ ನೋಡಬೇಕು. ಇಲ್ಲದಿದ್ದರೆ ಅದನ್ನು ಕೈಬಿಡಬೇಕು. ಇಲ್ಲದಿದ್ದರೆ ಆದಾಯವನ್ನು ಹೆಚ್ಚಿಗೆ ಮಾಡಬೇಕು. ಏತಕ್ಕೆಂದರೆ, ಸಣ್ಣ ಕಂಟ್ರಾಕ್ಟರಿಗೆ ಇದರಲ್ಲಿ ಉತ್ತೇಜನ ಕೊಡಬೇಕು ಏಕೆಂದರೆ ಸಂದರ್ಭನುಸಾರವಾಗಿ ದುಡ್ಡು ಕೊಡುವುದಕ್ಕಾಗುವುದಿಲ್ಲ. ನಮಗೆ ವಸೂಲಿಯೂ ಆಗುವುದಿಲ್ಲ. ಹೈದರಾಬಾದಿನಲ್ಲಿ ವಸೂಲು ಆಗಬೇಕಾದ ಹಣ ಇನ್ನೂ ವಸೂಲು ಆಗದೆಯೇ ಎಷ್ಟೋ ಹಣವನ್ನು ವಸೂಲು ಮಾಡಬೇಕಾಗಿದೆ. ಸರ್ಕಾರ ವಸೂಲು ಮಾಡದೆ ಬಿಟ್ಟಿದೆ. ಅದು ಬರುವುದಿಲ್ಲ. ನಾವು ಬಿಡುವುದಿಲ್ಲ. ಮೊದಲೇ ಇಷ್ಟು ದುಡ್ಡು ಎಂದು ಕೊಡಬೇಕಾಗುತ್ತದೆ. ಅಂಡರೆ ಮೂರು ತಿಂಗಳ ಆಕ್ಷ್ಯಾನ್ಸ್‌ನ್ನು ಮೊದಲೇ ಅವರು ಕೊಡಬೇಕಾಗುತ್ತದೆ. ಆ ಹಣವನ್ನು ಖಾಯಂ ಆಗಿ ಕೊಡಬೇಕು. ಸಣ್ಣ ಕಂಟ್ರಾಕ್ಟರಿಗೆ ಸಂದರ್ಭಾನುಸಾರವಾಗಿ ಹಣ ಇಲ್ಲದೇ ಇರುವುದರಿಂದ ಆ ಹಣ ಬರುವುದಿಲ್ಲವೆಂದು ಭೀತಿ ಒಂದು ಕಡೆ ಇರುತ್ತದೆ.

ಮತ್ತೆ ನಾವು ಈ ಸಣ್ಣ ಕಂಟ್ರಾಕ್ಟರುಗಳಿಗೆ ಉತ್ತೇಜನ ಕೊಡಲು ಪ್ರಯತ್ನ ಮಾಡಬೇಕೆಂದರೆ ಬಿಡ್ ಹಣ ಕಡಿಮೆ ಆಗುತ್ತದೆ ಅನ್ನತಕ್ಕ ಭೀತಿ ಇದ್ದೇ ಇರುತ್ತದೆ. ಇದನ್ನೆಲ್ಲಾ ಕೆಲವರ ಮನಸಾಪಲಿಗೇ ಬಿಡಬಾರದೂ ಎಂಬ ಉದ್ದೇಶ ಸರ್ಕಾರಕ್ಕೂ ಇದೆ. ಆದರೆ ಇವುಗಳನ್ನೆಲ್ಲಾ ಬೆಸಗೆ ಹಾಕಿಕೊಂಡು ಕೆಲಸ ಮಾಡುವುದು ಬಹಳ ಕಷ್ಟ.

ಶ್ರೀ ಬಿ. ಭಾಸ್ಕರ ಶೆಟ್ಟಿ —ತಾವು ಇಲ್ಲಿ ಕೊಟ್ಟಿರತಕ್ಕ ಅಂಕಿಅಂಶಗಳನ್ನು ನೋಡಿದರೆ ಬೆಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮಾತ್ರ ಈ ಲಿಕ್ಕರ್ ಕನ್‌ಸಂಷನ್ ವಿಶೇಷವಾಗಿ ಹೆಚ್ಚಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಂತೂ ಹಿಂದಿನ ವರ್ಷಕ್ಕಿಂತ ಈ ವರ್ಷದಲ್ಲಿ ಹೆಚ್ಚಿಗೆ ಲಿಕ್ಕರ್ ಮಾರಾಟವಾಗಿದೆ. ಅಂದಾಗ ಅಲ್ಲಿ ವರ್ಷಕ್ಕೆ ಶೇ ೨೦—೨೫ ರಷ್ಟು ಹೆಚ್ಚಿಗೆ ಕುಡುಕರ ಸಂಖ್ಯೆ ಬೆಳೆಯುತ್ತಿದೆ. ಇದನ್ನು ತಗ್ಗಿಸುವುದಕ್ಕೆ ಸರ್ಕಾರದವರೇನಾದರೂ ಕ್ರಮ ಕೈಗೊಳ್ಳುತ್ತಾರೆಯೇ ?

ಶ್ರೀ ಡಿ. ದೇವರಾಜೆ ಅರಸ್ —ಕುಡುಕರ ಸಂಖ್ಯೆಯನ್ನು ಕಡಿಮೆ ಮಾಡಬೇಕೆಂದರೆ ಸರ್ಕಾರಕ್ಕೆ ಬರತಕ್ಕ ಪರಮಾನವನ್ನು ಕಡಮೆ ಮಾಡಿಕೊಳ್ಳುವುದಕ್ಕೆ ತಯಾರಾಗಿರಬೇಕು ಅನ್ನುವುದು ಒಂದು ಪ್ರಶ್ನೆಯಾದರೆ, ಅಲ್ಲಿ ಕುಡಿಯತಕ್ಕವರ ಸಂಖ್ಯೆ ಬೆಳೆದಿದೆಯೇ ಅಥವಾ ಒಂದು ಡ್ರಾಂ ಕುಡಿಯುತ್ತಿದ್ದವರೇ ಎರಡು ಡ್ರಾಂ ಕುಡಿಯುವುದಕ್ಕೆ ಪ್ರಾರಂಭ ಮಾಡಿ ಅಲ್ಲಿ ಹೆಚ್ಚಿಗೆ ಲಿಕ್ಕರ್ ಖರ್ಚಾಗುತ್ತಿದೆಯೇ ಅನ್ನುವುದನ್ನೂ ಕೂಡ ನಾವು ಪರಿಶೀಲನೆ ಮಾಡಬೇಕಾಗಿದೆ. ಆದ್ದರಿಂದ ಜಾಸ್ತಿ ಲಿಕ್ಕರ್ ಮಾರಾಟ ಆಗುತ್ತಿದೆ ಅನ್ನುವ ದೊಂದೇ ಅಲ್ಲಿ ಹೆಚ್ಚು ಜನರು ಕುಡಿಯುತ್ತಾರೆಂದು ನಿರ್ಧಾರ ಮಾಡುವುದಕ್ಕೆ ಸಾಧ್ಯವಿಲ್ಲ. ಇನ್ನು ಸರ್ಕಾರ ಈ ಬಾಬಿನಿಂದ ಹೆಚ್ಚು ವರಮಾನ ಪಡೆಯಬೇಕೆಂಬ ಉದ್ದೇಶವಿಟ್ಟುಕೊಂಡಿರುವಾಗ ನಾವು

ಶ್ರೀ ಡಿ. ದೇವರಾಜ ಅರಸ್

ಸಾಧ್ಯವಾದಷ್ಟೂ ಹೆಚ್ಚು ಲಿಕ್ಕರನ್ನೇ ಮಾರಾಟ ಮಾಡಬೇಕಾಗುತ್ತದೆ. ಇಲ್ಲವೇ ಮತ್ತೆ ಪ್ರೊಹಿಬಿಷನ್ನನ್ನು ಜಾರಿಗೆ ತರಬೇಕು. ಪ್ರೊಹಿಬಿಷನ್ ಇದ್ದಾಗಲಂತೂ ಆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆಯುತ್ತಿದ್ದಷ್ಟು ಧಾಂದಲೆ ಮತ್ತೆಲ್ಲಿಯೂ ನಡೆಯುತ್ತಿರಲಿಲ್ಲ.

SRI B. B. SAYANAK.—May I know whether it is a fact that the son of an M.L.A. is a contractor at Belgaum and the M.L.A. is using his influence to start liquor shops near the Schools and Temples, in Belgaum ?

SRI DEVARAJ URS.—In the first instance, I do not know who that son of an M.L.A. is. Secondly, I do not know whether he is a major or a minor. In case he is a minor, he cannot be a contractor. In case he is a major, nothing prevents a son of an M.L.A. from becoming a a contractor. Thirdly, if this contractor, who is said to be the son of an M.L.A. is trying to make use of the influence of his father, certainly, it is wrong and if the hon. Member were to prove that this contractor is opening the shops and other things without the knowledge of the authorities or against the Rules, certainly, the department will take action against him.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಸುಧಾರಿಸಿದ ಮೇಲೆ ಹಾಲಿ ಇರತಕ್ಕ ಕಂಟ್ರಾಕ್ಟ್ ಪದ್ಧತಿಯನ್ನು ಬದಲಾಯಿಸಿ ಕೆಲವು ಸಣ್ಣ ಸಣ್ಣ ಕಂಟ್ರಾಕ್ಟರುಗಳಿಗೂ ಲೈಸೆನ್ಸ್ ಕೊಡತಕ್ಕ ಪದ್ಧತಿಯನ್ನು ಮತ್ತೆ ರಿವೈಜ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್ —ನಮಗೆ ಈಗ ಮುಖ್ಯವಾಗಿ ಹಣ ಬೇಕು. ತಾವೇ ಅನೇಕ ಸಂದರ್ಭಗಳಲ್ಲಿ ನಮಗೆ ಆ ಪ್ರಾಜೆಕ್ಟ್ ಬೇಕು ಈ ಪ್ರಾಜೆಕ್ಟ್ ಬೇಕೆಂದು ಕೇಳುತ್ತಿರುತ್ತೀರಿ. ಅದಕ್ಕೆಲ್ಲಾ ವಿಶೇಷವಾಗಿ ಹಣ ಬೇಕು. ಈ ೫ ವರ್ಷಗಳು ಕಳೆಯಲಿ. ಮುಂದಿನ ವಿಚಾರ ಮುಂದಕ್ಕೆ ನೋಡೋಣ. ನಮಗೆ ದೊಡ್ಡ ಜಲಾಶಯಗಳಿಗಾಗಿ ವಿಶೇಷ ಹಣ ಬೇಕಾಗಿದೆ.

HANDLING OF MANGANESE ORE

547. SRI KONANDUR LINGAPPA.—(Thirthahalli)

Will the Minister for Industries be pleased to state—

(*a*) whether it has come to the notice of the Government that the State will get more revenue if the extraction, transportaion, *etc.*, of Manganese ore is handled by the Government instead of entrusting the same to private parties ;

(*b*) whether the Government intend to establish a Manganese Factory in thirthahalli. Hosanagar areas of Shimoga district in Malnad area where Manganese is available in abundance :

(*c*) whether the Government have considered the question of establishing a small Manganese factory near Kodachadri Hill at a cost of Rupees one crore ?